(3) ಸಭೆಯ ಮುಂದಿಡಲಾದ ಕಾಗದ ಪತ್ರಗಳು.

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :— ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಪರವಾಗಿ, ಮಾನ್ಯ ಅಧ್ಯಕ್ಷರೆ, ನ್ಯಾಯಮೂರ್ತಿ ಶ್ರೀ ಆರ್.ಜಿ. ದೇಸಾಯಿ ವಿಚಾರಣಾ ಆಯೋಗದ ವರದಿಯನ್ನು ಈ ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು :— ಸಭೆಯ ಮುಂದೆ ಮಂಡಿಸಲಾಯಿತು.

(4) ಗಮನ ಸೆಳೆಯುವ ಸೂಚನೆ

ವಿಷಯ: ಗದಗ-ಬೆಟಗೇರಿ ನಗರದಲ್ಲಿ ನೀರು ಸರಬರಾಜು ವ್ಯವಸ್ಥೆಗೆ ಹಣ ಮಂಜೂರು ಮಾಡುವ ಬಗ್ಗೆ.

+ ಶ್ರೀ ಡಿ.ಆರ್. ಪಾಟೀಲ್ (ಗದಗ) :— ಮಾನ್ಯ ಅಧ್ಯಕ್ಷರೆ, ಗದಗ-ಬೆಟಗೇರಿ ನಗರದಲ್ಲಿ ನೀರು ಸರಬರಾಜು ಮಾಡುವ ವ್ಯವಸ್ಥೆಯನ್ನು ಸುಧಾರಣೆ ಮಾಡಲು ಸರ್ಕಾರದಿಂದ ಹಣ ಮಂಜೂರು ಮಾಡುವ ಬಗ್ಗೆ ನಾನು ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಗದಗ-ಬೆಟಗೇರಿ ನೀರು ಸರಬರಾಜು ಯೋಜನೆಗಾಗಿ 940 ಲಕ್ಷ ರೂಪಾಯಿಗಳ ಅಂದಾಜಿಗೆ ಸರ್ಕಾರ 1984 ರಲ್ಲಿಯೇ ಅನುಮೋದನೆ ನೀಡಿತ್ತು. ಸದರಿ ಯೋಜನೆಯನ್ನು 1992ರಲ್ಲಿ ಚಾಲ್ತಿಗೊಳಿಸಲಾಗಿದೆ. ಯೋಜನೆಯ ಒಂದನೇ ಹಂತವನ್ನು 1990ರಲ್ಲಿ ಕೈಗೆತ್ತಿಕೊಂಡಿದ್ದು ಬೇಕಾಗುವ ನೀರಿನ ಬೇಡಿಕೆಯಾಗಿ 1364 ದಶಲಕ್ಷ ಲೀಟರ್ ನೀರನ್ನು ಗದಗ-ಬೆಟಗೇರಿ ನಗರಕ್ಕೆ ಸರಬರಾಜು ಮಾಡಲು ವಿನ್ಯಾಸಗೊಳಿಸಲಾಗಿದೆ. ಹಾಲಿ ವ್ಯವಸ್ಥೆಯಿಂದ ಗದಗ-ಬೆಟಗೇರಿ ಪಟ್ಟಣಕ್ಕೆ ಪ್ರತಿದಿನ ಸುಮಾರು 12.712 ದಶಲಕ್ಷ ಲೀಟರ್‌ಗಳಷ್ಟು ನೀರನ್ನು ಸರಬರಾಜು ಮಾಡಲಾಗುತ್ತಿದೆ. ಸದರಿ ಯೋಜನೆಯಡಿ ವಿತರಣಾ ವ್ಯವಸ್ಥೆ ಮಾಡಲು ರೂ. 19.14 ಲಕ್ಷ ಅವಶ್ಯವಿದ್ದು ಕೆಲಸವನ್ನು ಕೈಗೊಂಡಿದ್ದರೂ ಸಹ ನಗರದ ಎಲ್ಲಾ ಪ್ರದೇಶಗಳಿಗೂ ನೀರು ಸರಬರಾಜು ಮಾಡಲು ಸಾಧ್ಯವಾಗಿರುವುದಿಲ್ಲ. ಆ ಮಧ್ಯೆ ನಗರ ಬಹಳ ಬೆಳವಣಿಗೆ ಹೊಂದಿದ್ದು ಸಾಕಷ್ಟು ಜಲ ಸಂಗ್ರಹಣಾಗಾರಗಳು ಮತ್ತು ವಿತರಣಾ ವ್ಯವಸ್ಥೆ ಇಲ್ಲದಿರುವ ಕಾರಣ ನಗರದ ಎಲ್ಲಾ ಪ್ರದೇಶಗಳಿಗೂ ಸರಿಸಮಾನವಾಗಿ ವಿತರಿಸಲು ಸಾಧ್ಯವಾಗುತ್ತಿಲ್ಲ. ಗದಗ-ಬೆಟಗೇರಿ ಪಟ್ಟಣಕ್ಕೆ ಮಂಡಳಿಯು ಸಗಟು ಸರಬರಾಜು ನಿರ್ವಹಿಸುತ್ತಿದ್ದು, ವಿತರಣಾ ವ್ಯವಸ್ಥೆಯನ್ನು ಗದಗ-ಬೆಟಗೇರಿ ನಗರಸಭೆ ನಿರ್ವಹಿಸುತ್ತಿದೆ. ಗದಗ-ಬೆಟಗೇರಿ ನಗರಕ್ಕೆ ಅಗತ್ಯವಾಗಿ ಬೇಕಾಗುವ ಜಲ ಸಂಗ್ರಹಣಾಗಾರಗಳನ್ನು ನಿರ್ಮಿಸಿ, ವಿತರಣಾ ವ್ಯವಸ್ಥೆಯನ್ನು ಮರು ವಿನ್ಯಾಸಗೊಳಿಸಿ ಅಳವಡಿಸಲು ಹಾಲಿ ದರ ಪಟ್ಟಿಯಂತೆ 15 ಕೋಟಿ ರೂಪಾಯಿಗಳ ಅಂದಾಜು ತಯಾರಿಸಲಾಗಿದ್ದು, ಇದು ಪರಿಶೀಲನಾ ಹಂತದಲ್ಲಿದ್ದು, ಸದ್ಯದಲ್ಲಿಯೇ ಸದರಿ ಅಂದಾಜು ಪಟ್ಟಿಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗುವುದೆಂದು ಕರ್ನಾಟಕ ಜಲಮಂಡಳಿ ತಿಳಿಸಿರುತ್ತದೆ.